**ದಿನಾಂಕ 29.10.2025** **ಸಿಸಿ 1152/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ನಾನು ಬಿ. ಎಫ್.ಎ. ಪದವೀಧರ. ನಾನು ಎನಿಮೇಶನ್ ಕೆಲಸ ಮಾಡುತ್ತಿದ್ದೇನೆ. ಏಪ್ರೀಲ್ 2022 ರಲ್ಲಿ ಬೆಂಗಳೂರಿನ ಒಂದು ಖಾಸಗಿ ಕಂಪನಿಯಲ್ಲಿ 2011 ರಿಂದ 2023 ಮೇ ವರೆಗೆ ಕೆಲಸ ಮಾಡುತ್ತಿದ್ದೆ. ನಾನು ಕೆಲಸಕ್ಕೆ ಸೇರಿದಾಗ ನನ್ನ ಸಂಬಳ ತಿಂಗಳಿಗೆ ರೂ.45,000 ಇದ್ದು, ಕೆಲಸ ಬಿಡುವ ಕಾಲಕ್ಕೆ ತಿಂಗಳಿಗೆ ರೂ. 1.14 ಲಕ್ಷ ಇತ್ತು. ಸದರಿ ವಿಚಾರವಾಗಿ ದಾಖಲೆಗಳನ್ನು ನನಗೆ ತೊಂದರೆ ಇಲ್ಲ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರ. 2020-21 ಮತ್ತು 2021-2022 ಆದಾಯ ತೆರಿಗೆ ಪಾವತಿಸಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು 2005 ರಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಆರೋಪಿಯ ಸ್ವಂತ ಊರು ಕೋಲಾರ. ಅವರ ತಂದೆಯ ಹೆಸರು ಗೊತ್ತಿಲ್ಲ. ಪ್ರಸ್ತುತ ಪ್ರಕರಣಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಪಿರ್ಯಾದಿಯಲ್ಲಿ ಆರೋಪಿಯ ತಂದೆಯ ಹೆಸರು ಬರಸಿದ್ದೇನೋ ಇಲ್ಲವೋ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ಆರೋಪಿಗೆ ರೂ.7.68 ಲಕ್ಷ ಸಾಲವನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದೇನೆ. ರೂ.7.68 ಲಕ್ಷ ನನಗೆ ದೊಡ್ಡ ಮೊತ್ತ ಎಂದರೆ ಸರಿ. ಆರೋಪಿಯು 2022 ರ ಏಪ್ರೀಲ್ ತಿಂಗಳಿನಲ್ಲಿ ನನಗೆ ಸಾಲವನ್ನು ಕೇಳಿದ್ದು, ದಿನಾಂಕ 10.04.2022 ರಂದು ನಾನು ಆರೋಪಿಗೆ ರೂ.7.68 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿರುತ್ತೇನೆ. ಇಷ್ಟು ದೊಡ್ಡ ಮೊತ್ತದ ಹಣವನ್ನು ಕೊಡಬೇಕಾದರೆ ಬ್ಯಾಂಕಿನ ಮೂಲಕ ಕೊಡಬೇಕಾಗುತ್ತದೆ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ಆರೋಪಿಗೆ ನಾನು ಸದರಿ ಹಣವನ್ನು ಯಾವ ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಪಿರ್ಯಾದಿಯಲ್ಲಿ ಹೇಳಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕ 10.04.2022 ರಂದು ನನ್ನ ಹತ್ತಿರ ರೂ.7.68 ಲಕ್ಷ ಹಣ ಇತ್ತು ಎಂದು ತೋರಿಸಲು ನನ್ನ ಬಳಿ ದಾಖಲುಗಳ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಆರೋಪಿಗೆ ನಾನು ಸದರಿ ಹಣವನ್ನು ನನ್ನ ಮನೆಯಲ್ಲಿ ಕೊಟ್ಟಿದ್ದು, ಆ ಕಾಲಕ್ಕೆ ನನ್ನ ಹೆಂಡತಿ ಮತ್ತು ಅವಳ ತಂದೆ ವಿಶ್ವನಾಥ ರವರು ಇದ್ದರು. ನನ್ನ ಪಿರ್ಯಾದಿಯಲ್ಲಿ ಸದರಿ ರೂ. 7.68 ಲಕ್ಷ ಹಣವನ್ನು ಯಾರಿಂದ ಮತ್ತು ಯಾವ ರೀತಿಯಾಗಿ ಪಡೆದಿರುತ್ತೇನೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ನನ್ನ ಹೆಂಡತಿ ಗೃಹಿಣಿ. ನನ್ನ ಮಾವ ನಿವೃತ್ತ ಪ್ರೌಢ ಶಾಲಾ ಪ್ರಾಂಶುಪಾಲರು. ನನ್ನ ಪಿರ್ಯಾದಿಯಲ್ಲಿ ಸಾಲದ ಹಣವನ್ನು ನನ್ನ ಹೆಂಡತಿ ಮತ್ತು ಸಂಬಂಧಿಕರಿಂದ ಪಡೆದಿರುತ್ತೇನೆ ಎಂದು ಹೇಳಿದ್ದು, ಸಂಬಂಧಿಕರು ಎಂದರೆ ನನ್ನ ಮಾವ, ನನ್ನ ಹೆಂಡತಿಯ ಸಹೋದರರು. ಅವರ ಹೆಸರು ಪ್ರವೀಣ್ ಮತ್ತು ಸಿದ್ದು. ನನ್ನ ಹೆಂಡತಿಯಿಂದ ರೂ.2.00 ಲಕ್ಷ, ಮಾವನಿಂದ ರೂ.2.00 ಲಕ್ಷ, ಪ್ರವೀಣ್ ನಿಂದ ರೂ.1.00 ಲಕ್ಷ ಉಳಿದ ಮೊತ್ತವನ್ನು ನನ್ನ ಹತ್ತಿರ ಇತ್ತು. ಸದರಿ ಹಣವನ್ನು ಸದರಿಯವರಿಂದ ಸುಮಾರು ಒಂದು ವಾರದ ಮುಂಚೆ ಪಡೆದಿದ್ದೆ. ನನ್ನ

ಪಿರ್ಯಾದಿಯಲ್ಲಿ ಆರೋಪಿಯು ನಿರ್ದಿಷ್ಟವಾಗಿ ಯಾವ ದಿನಾಂಕದಂದು ಸಾಲವನ್ನು ಕೇಳಿದ್ದರು ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಸದರಿಯವರಿಂದ ಪಡೆದ ಸಾಲದ ಹಣವನ್ನು ನಾನು ನನ್ನ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿಲ್ಲ. ಸಾಮಾನ್ಯವಾಗಿ ಯಾರಿಂದಾದರೂ ಸಾಲವನ್ನು ಪಡೆದರೆ ಅಥವಾ ಸಾಲವನ್ನು ಕೊಟ್ಟಾಗ ಅದನ್ನು ಕಡ್ಡಾಯವಾಗಿ ಆದಾಯ ತೆರಿಗೆ ಪಾವತಿಯಲ್ಲಿ ನಮೂದು ಮಾಡಿಸಬೇಕು ಎಂದರೆ ಸರಿ. ಈ ರೀತಿಯಾಗಿ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿಗೆ ಸಾಲದ ಹಣವನ್ನು ನೀಡಿದ ಬಗ್ಗೆ ಯಾವ ವರ್ಷದ ಆದಾಯ ತೆರಿಗೆ ಪಾವತಿಯಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೀಡಿದ ಸಾಲವನ್ನು ಮರುಪಾವತಿ ಮಾಡದೇ ಇರುವ ಸಾಲ ಎಂದು ಆದಾಯ ತೆರಿಗೆ ಯಲ್ಲಿ ತೋರಿಸಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನ ಹೆಂಡತಿ, ಮಾವ ಮತ್ತು ಪ್ರವೀಣ್ ರವರ ಹೆಸರನ್ನು ಸಾಕ್ಷಿದಾರರ ಪಟ್ಟಿಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿಯವರ ಸಾಕ್ಷ್ಯ ವಿಚಾರಣೆ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಆರೋಪಿಯು ರೂ. 7.68 ಲಕ್ಷ ಹಣವನ್ನು ಎರಡು ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಹೇಳಿದ್ದರು. ಸದರಿ ಸಾಲದ ಹಣವನ್ನು ನಾನು ಬಡ್ಡಿ ರಹಿತವಾಗಿ ಕೊಟ್ಟಿರುತ್ತೇನೆ. ಬಡ್ಡಿ ರಹಿತ ಕೊಡುವ ಸಾಲವನ್ನು ಕೈಗಡ ಸಾಲ ಎನ್ನುತ್ತಾರೆ ಎಂದರೆ ಸರಿ. ನನ ಪಿರ್ಯಾದಿಯಲ್ಲಿ ನಾನು ಸಾಲ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ನಾನು ಆರೋಪಿಗೆ ಸಾಲವನ್ನು ಕೊಟ್ಟಾಗ ಅವರಿಂದ ಯಾವುದೇ ದಾಖಲೆಯನ್ನು ಪಡೆದಿರುವುದಿಲ್ಲ. ಅಷ್ಟು ಮೊತ್ತದ ಸಾಲವನ್ನು ದಾಖಲೆ ಇಲ್ಲದೇ ಕೊಡುವುದಿಲ್ಲ ಎಂದರೆ ಸರಿ. ದಿನಾಂಕ 10.04.2022 ರಂದು ನಾನು ಆರೋಪಿಗೆ ರೂ.7.68 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಷ್ಟು ಹಣವನ್ನು ಕೊಡಲು ಸಾಮಾರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಹೆಂಡತಿ, ಮಾವ ಮತ್ತು ಅಳಿಯಂದಿರರಿಂದ ಹಣವನ್ನು ಪಡೆದುಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಸಾಲದ ಹಣ ಕೊಟ್ಟ ಎರಡು ತಿಂಗಳ ನಂತರದಿಂದ ಪ್ರತೀ ವಾರಕ್ಕೆ ದೂರವಾಣಿ ಕರೆ ಮಾಡಿ ಹಣ ಮರುಪಾವತಿ ಮಾಡುವಂತೆ ಕೇಳುತ್ತಿದ್ದೆ. ಸದರಿ ದೂರವಾಣಿ ಕರೆಗಳ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನನಗೆ ಆರೋಪಿ 2018 ರಿಂದ ಪರಿಚಯವಿದೆ. ಪ್ರಸ್ತುತ ಪ್ರಕರಣದಲ್ಲಿ ಹೇಳಿರುವ ವ್ಯವಹಾರವನ್ನು ಹೊರತು ಪಡಿಸಿ ನನ್ನ ಮತ್ತು ಆರೋಪಿಯ ಮಧ್ಯೆ ಬೇರೆ ವ್ಯವಹಾರ ಇತ್ತು. ಸದರಿ ವ್ಯವಹಾರ ಎಂದರೆ ನಾನು ಮತ್ತು ಆರೋಪಿ ಹರಿಹರದ ಗ್ರೀನ್ ಸಿಟಿ, ಗುತ್ತೂರು, ಅಮರಾತಿ ಗ್ರಾಮದ ಸರ್ವೆ ನಂಬರಿನ ಸೈಟಿನ ವಿಚಾರವಾಗಿ ಇದೆ. ಸದರಿ ರೂ.7.68 ಲಕ್ಷ ಸಾಲದ ಹಣದ ಮರುಪಾವತಿಯ ಬದಲಾಗಿ ಆರೋಪಿಯು ಸೈಟ್ ನ್ನು ಕೊಡುಬೇಕು ಎಂದು ನನ್ನ ಪಿರ್ಯಾದಿಯಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ಸೈಟ್ ಯಾವುದು ಎಂದು ಹೇಳಲು ಆಗುವುದಿಲ್ಲ. ಆರೋಪಿಗೆ ನಾನು ಸದರಿ ಸೈಟಿನ ವಿಚಾರವಾಗಿ ಕೇಳಿರುವುದಿಲ್ಲ.

ಆರೋಪಿಯು ದಿನಾಂಕ 07.09.2023 ರಂದು ನನಗೆ ನಿಪಿ 1 ಚೆಕ್ ನ್ನು ಹರಿಹರದ ಗಾಂಧೀ ಸರ್ಕಲ್ ನಲ್ಲಿರುವ ಪೊಲೀಸ್ ಠಾಣೆಯ ಹತ್ತಿರ ಕೊಟ್ಟಿರುತ್ತಾರೆ. ನಿಪಿ 1 ಚೆಕ್ ನಲ್ಲಿ ನಮೂದಿಸಿರುವ

**ದಿನಾಂಕ** 29.10.2025 **ಸಿಸಿ** 1152/2023

**ಪಿಡಬ್ಲ್ಯೂ** 1

ಹೆಸರಿನ ಬರವಣಿಗೆ ಮತ್ತು ಅಕ್ಷರಗಳಲ್ಲಿ ನಮೂದಿಸಿರುವ ಮೊತ್ತದ ಬರವಣಿ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ 1 ರಲ್ಲಿ ಹೆಸರನ್ನು ನಾನೇ ಬರೆದಿರುತ್ತೇನೆ. ಅದೇ ರೀತಿ ನಿಪಿ 7 ಚೆಕ್ ನಲ್ಲಿ ನಮೂದಿಸಿರುವ ಹೆಸರಿನ ಬರವಣಿಗೆ ಮತ್ತು ಅಕ್ಷರಗಳಲ್ಲಿ ನಮೂದಿಸಿರುವ ಮೊತ್ತದ ಬರವಣಿ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ 7 ರಲ್ಲಿ ಹೆಸರನ್ನು ನಾನೇ ಬರೆದಿರುತ್ತೇನೆ. ನಿಪಿ 1 ಮತ್ತು 7 ರಲ್ಲಿ ಮೊತ್ತವನ್ನು ಬರೆದಿರುವ ಬರವಣಿಗೆ ಮತ್ತು ನಮೂದಿಸಿರುವ ದಿನಾಂಕದ ಬರವಣಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ 1 ಮತ್ತು 7 ರಲ್ಲಿ ನಮೂದಿಸಿರುವ ದಿನಾಂಕ ವನ್ನು ಆರೋಪಿ ಬರೆದಿರುತ್ತಾನೆ. ಅದೇ ರಿತೀ ನಿಪಿ 1 ಮತ್ತು 7 ರಲ್ಲಿ ಅಕ್ಷರಗಳಲ್ಲಿ ಬರೆದ ಮತ್ತು ಅಂಕಿಗಳಲ್ಲಿ ಬರೆದ ಮೊತ್ತವನ್ನು ಒಂದೇ ರೀತಿಯದ್ದಾಗಿದೆ ಎಂದರೆ ಸರಿ. ನಿಪಿ 1 ಮತ್ತು 7 ರಲ್ಲಿನ ಬರವಣಿಗೆಯ ಒಂದೇ ವ್ಯಕ್ತಿಯದ್ದಲ್ಲಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ 1 ಮತ್ತು 7 ಕ್ಕೆ ಆರೋಪಿಯು ಸಹಿ ಮಾಡಿ ಮೊತ್ತವನ್ನು ಬರೆದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ಮತ್ತು 7 ನ್ನು ಬ್ಯಾಂಕಿಗೆ ಸಲ್ಲಿಸಿದ ಬಗ್ಗೆ ಜಮಾ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ